# ಬ್ರಾಡ್: ಟೆಸ್ಟ್ ವಯ್ಯಾಕರಣಿ

**ಟೆಸ್ಟ್ ಕ್ರಿಕೆಟ್‌ನ ಸೌಂದರ್ಯ ಹೆಚ್ಚಿಸಿದ ಆಟಗಾರರಲ್ಲಿ ಒಬ್ಬರಾದ ಸ್ಟುವರ್ಟ್ ಬ್ರಾಡ್ ಈಗ ಆಟದ ಅಂಗಳದಿಂದ ದೂರ ಸರಿದಿದ್ದಾರೆ. ಆದರೆ, ಕ್ರೀಡಾರಸಿಕರ ನೆನಪಿನಂಗಳದಲ್ಲಿ ಬ್ರಾಡ್ ಬಿಡಿಸಿದ ಕಲಾತ್ಮಕ ಚಿತ್ತಾರಗಳು ಶಾಶ್ವತ.**

■ ಎನ್ವಿ



2015ರ ಆಗಸ್ಟ್ 6. ಇಂಗ್ಲೆಂಡ್–ಆಸ್ಟ್ರೇಲಿಯಾ ಆ್ಯಷಸ್ ಕ್ರಿಕೆಟ್ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯ ಶುರುವಾದ ದಿನ. 21 ರನ್‌ಗಳಾಗುವಷ್ಟರಲ್ಲಿ ಆಸ್ಟ್ರೇಲಿಯಾದ ನಾಲ್ವರು ಪೆವಿಲಿಯನ್‌ಗೆ ಮರಳಿದ್ದರು. ಆ ಪೈಕಿ ಮೂರು ವಿಕೆಟ್‌ಗಳು ಸ್ಟುವರ್ಟ್ ಬ್ರಾಡ್‌ಗೆ ಸಂದಿದ್ದವು. ಇನ್ನೊಂದು ಎಸೆತ. ಕ್ರಿಸ್ ರೋಜರ್ಸ್ ಡ್ರೈವ್‌ಗೆ ಯತ್ನಿಸಿದ್ದೇ ಚೆಂಡು ಬ್ಯಾಟ್‌ನ ಅಂಚಿಗೆ ಬಡಿದು ಚಿಮ್ಮಿತು. ಐದನೇ ಸ್ಲಿಪ್‌ನಲ್ಲಿದ್ದ ಬೆನ್ ಸ್ಟೋಕ್ಸ್ ತಮ್ಮ ಇಡೀ ದೇಹವನ್ನು ಬಲಕ್ಕೆ ಗಾಳಿಯಲ್ಲಿ ತೇಲಿಬಿಟ್ಟು ಎಲ್ಲಿಗೋ ನುಗ್ಗುತ್ತಿದ್ದ ಚೆಂಡನ್ನು ಒಂದೇ ಕೈನಲ್ಲಿ ಹಿಡಿದರು. ಅದನ್ನು ನೋಡಿದ ಬ್ರಾಡ್ ಕಣ್ಣುಗಳು ಅಗಲಗೊಂಡವು. ಎರಡೂ ಕೈಗಳು ಬಾಯನ್ನು ಮುಚ್ಚಿದವು. ಆ ವಿಕೆಟ್‌ನ ಇಷ್ಟೂ ಅಚ್ಚರಿಯ ಸಂಭ್ರಮಗಳ ಫೋಟೊಗಳು '2015ರ ಸಮ್ಮರ್ ಫೋಟೊಗಳು' ಎಂದೇ ಜನಜನಿತ.

19ನೇ ಓವರ್‌ನಲ್ಲಿ ನೇಥನ್ ಲಯನ್ ಬ್ಯಾಟ್‌ನ ಅಂಚಿಗೆ ಬಡಿದ ಚೆಂಡನ್ನು ಮತ್ತೆ ಸ್ಟೋಕ್ಸ್ ಹಿಡಿದಾಗ, 6ನೇ ಸ್ಲಿಪ್‌ನಲ್ಲಿ ಇದ್ದರು. 60 ರನ್‌ಗಳಿಗೆ ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ಆಲ್‌ಔಟ್. 9.3 ಓವರ್‌ಗಳನ್ನು ಬೌಲ್ ಮಾಡಿದ್ದ ಬ್ರಾಡ್ 15 ರನ್ ನೀಡಿ 8 ವಿಕೆಟ್ ಪಡೆದಿದ್ದರು. ಆ ಎಲ್ಲ ವಿಕೆಟ್‌ಗಳು ಫೀಲ್ಡರ್‌ಗಳು ಪಡೆದಿದ್ದ ಕ್ಯಾಚ್‌ಗಳಿಂದ ಬಂದಂಥವು. ಟೆಸ್ಟ್ ಕ್ರಿಕೆಟ್ ಬೌಲಿಂಗ್‌ನಲ್ಲಿನ ಶಿಸ್ತಿನ ಪಾಠ ಹೇಳುವ ಕಮ್ಮಟದಂತೆ ಕಂಡಿದ್ದ ಸ್ಪೆಲ್ ಅದು. ಗುಡ್ ಲೆಂಗ್ತ್‌ನಲ್ಲಿ ಚೆಂಡನ್ನು ಹಾಕುತ್ತಲೇ ಬ್ಯಾಟ್ಸ್‌ಮನ್ ಮನಸ್ಸಿನಲ್ಲಿ ಪ್ರಶ್ನೆಗಳನ್ನು ಮೂಡಿಸುವಂಥ ಲೇಟ್ ಸ್ವಿಂಗ್ ಬೌಲಿಂಗ್ ಕಂಡು ಆಸ್ಟ್ರೇಲಿಯಾ ಪಾಳಯ ದಂಗುಬಡಿದಿತ್ತು.

ಮೊನ್ನೆ ಬ್ರಾಡ್ ನಿವೃತ್ತಿ ಪ್ರಕಟಿಸಿದಾಗ ಅವರ ಜೀವಮಾನ ಶ್ರೇಷ್ಠ ಸಾಧನೆಯ ಆ ಸ್ಪೆಲ್ ಸ್ಮೃತಿಪಟಲದಲ್ಲಿ ಹಾದುಹೋಯಿತು. ಭಾರತದ ಯುವರಾಜ್ ಸಿಂಗ್ ಕೈಲಿ ಮೊದಲ ಟ್ವೆಂಟಿ20 ವಿಶ್ವಕಪ್‌ನಲ್ಲಿ ಒಂದು ಓವರ್‌ನ ಆರು ಬಾಲ್‌ಗಳಿಗೆ ಆರೂ ಸಿಕ್ಸರ್‌ಗಳನ್ನು ಅದಕ್ಕೂ ಎಂಟು ವರ್ಷ ಮೊದಲು ಚಚ್ಚಿಸಿಕೊಂಡಿದ್ದುದು ಇದೇ ಬ್ರಾಡ್.

2009ರಲ್ಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ಇನ್ನೂ ಹಸುಗೂಸು. ಆ್ಯಷಸ್ ಸರಣಿಯ ಮೊದಲ ನಾಲ್ಕು ಪಂದ್ಯಗಳಾದ ಮೇಲೆ 2–2ರಲ್ಲಿ ಸಮಬಲ. ಅಂತಿಮ ಟೆಸ್ಟ್‌ನಲ್ಲಿ ಮ್ಯಾಜಿಕ್ ಮಾಡುವಂತೆ ಬ್ರಾಡ್ ಕೈಗೆ ಚೆಂಡು ಕೊಟ್ಟಿದ್ದು ಆಗಿನ ನಾಯಕ ಮೈಕಲ್ ವಾನ್. 12 ಓವರ್‌ಗಳಲ್ಲಿ 37 ರನ್ ನೀಡಿ, ಐದು ವಿಕೆಟ್‌ಗಳನ್ನು ಬ್ರಾಡ್ ಕಿತ್ತುಕೊಟ್ಟರು.

ಯುವರಾಜ್ ಸಿಂಗ್ ಕೈಲಿ ಚಚ್ಚಿಸಿಕೊಂಡ ಮೇಲೆ ಶ್ರೀಲಂಕಾ ವಿರುದ್ಧದ ಏಕದಿನ ಪಂದ್ಯಗಳ ಸರಣಿಯಲ್ಲಿ 11 ವಿಕೆಟ್ ಬ್ರಾಡ್ ಪಡೆದುಕೊಂಡರು. ಅವರ ವೇಗದ ಬೌಲಿಂಗ್‌ನ ಕಸುವು ಸಹ ಆಟಗಾರರು ಹಾಗೂ ಆಯ್ಕೆದಾರರಲ್ಲಿ ನಂಬಿಕೆ ಮೂಡಿಸಿದ ಸರಣಿ ಅದು. ಅದರಿಂದಲೇ ಅವರು ಟೆಸ್ಟ್‌ಗೆ ಆಯ್ಕೆಯಾದದ್ದು. ಹಾಗಿದ್ದೂ 2011ರಿಂದ 14ರ ಅವಧಿಯಲ್ಲಿ 27 ಟ್ವೆಂಟಿ20 ಕ್ರಿಕೆಟ್ ಪಂದ್ಯಗಳಲ್ಲಿ ಅವರು ಇಂಗ್ಲೆಂಡ್ ತಂಡವನ್ನು ಮುನ್ನಡೆಸಿದರು. ವಿಚಿತ್ರವೆಂದರೆ, 2014ರ ನಂತರ ಅವರು ಟ್ವೆಂಟಿ20 ಅಂತರರಾಷ್ಟ್ರೀಯ ಕ್ರಿಕೆಟ್ ಆಡಲೇ ಇಲ್ಲ. ಇನ್ನೆರಡು ವರ್ಷ ಕಳೆದ ಮೇಲೆ ಏಕದಿನದ ಪಂದ್ಯಗಳಿಂದಲೂ ದೂರ ಉಳಿದರು. ಆ್ಯಂಡರ್‌ಸನ್ ತರಹವೇ ತಾವೂ ಟೆಸ್ಟ್ ಕ್ರಿಕೆಟ್‌ನ ಆರಾಧಕರಾದರು. ಇವರಿಬ್ಬರ ಸುದೀರ್ಘಾವಧಿಯ ಆರಂಭಿಕ ಸ್ಪೆಲ್‌ಗಳನ್ನು ಎದುರಾಳಿ ತಂಡಗಳು ಕಂಡಿವೆ.

ಪ್ರಸವಕ್ಕೆ ನಿಗದಿಯಾಗಿದ್ದ ದಿನಕ್ಕಿಂತ ಹನ್ನೆರಡು ವಾರ ಮುಂಚೆ ಬ್ರಾಡ್ ತಮ್ಮ ತಾಯಿಯ ಹೊಟ್ಟೆಯಿಂದ ಹೊರಬಂದಿದ್ದರು. ಮಗು ಬದುಕುವುದೇ ಅನುಮಾನ ಎಂಬ ಕಾಲಘಟ್ಟದಲ್ಲಿ ಜಾನ್ ಎಂಬ ವೈದ್ಯರು ಆರೈಕೆ ಮಾಡಿ ಜೀವ ಉಳಿಸಿದ್ದರು. ಅದಕ್ಕೇ 'ಸ್ಟುವರ್ಟ್ ಕ್ರಿಸ್ಟೋಫರ್ ಜಾನ್ ಬ್ರಾಡ್' ಎಂದು ಇವರಿಗೆ ಹೆಸರಿಟ್ಟರು. 'ಜಾನ್' ಜೀವ ಉಳಿಸಿದ ವೈದ್ಯರ ಹೆಸರಿನ ಸೂಚಕ.

ಅಸ್ತಮಾದಿಂದ ಬಳಲುತ್ತಿದ್ದ, 2010ರಲ್ಲಿ ಗಾಯಗೊಂಡು ತಡಬಡಾಯಿಸಿದ, ಕೋಪ ತಲೆಮೇಲೆ ಹೊತ್ತು ಆಗೀಗ ವಿಲಕ್ಷಣವಾಗಿ ವರ್ತಿಸುತ್ತಿದ್ದ, ವಿಕೆಟ್ ಮೇಲಿನ ಬೇಲ್‌ಗಳನ್ನು ಅತ್ತಿತ್ತ ಮಾಡಿದರೆ ಅಥವಾ ಮುಟ್ಟಿದರೆ ವಿಕೆಟ್ ಬೀಳುತ್ತದೆ ಎನ್ನುವ ಮೌಢ್ಯವನ್ನು ನೇವರಿಸಿದ (ಅವರ ಕೊನೆಯ ಪಂದ್ಯದಲ್ಲೂ ಇದನ್ನು ಮಾಡಿ, ಫಲ ಸಿಕ್ಕಿದ್ದನ್ನು ಸಂಭ್ರಮಿಸಿದ್ದು ವಿಶೇಷ) ಬ್ರಾಡ್ ಬೂಟುಗಳನ್ನೀಗ ನೇತುಬಿಟ್ಟಿದ್ದಾರೆ.

167 ಟೆಸ್ಟ್‌ಗಳಲ್ಲಿ 604 ವಿಕೆಟ್ ಪಡೆಯುವುದು–ಅದೂ ಒಬ್ಬ ವೇಗದ ಬೌಲರ್–ಅಪರೂಪವೇ ಹೌದು. ಆ್ಯಂಡರ್‌ಸನ್ 690 ವಿಕೆಟ್‌ಗಳನ್ನು ಪಡೆದ ವೇಗಿ ಎನಿಸಿದ್ದು, ಇನ್ನೂ ಆಟ ಮುಂದುವರಿಸಿದ್ದಾರೆ. ಇಷ್ಟೊಂದು ವಿಕೆಟ್‌ಗಳನ್ನು ಇವರಿಬ್ಬರ ಹೊರತಾಗಿ ಬೇರೆ ಯಾವ ವೇಗದ ಬೌಲರ್‌ಗಳೂ ಪಡೆದಿಲ್ಲ. ಏಕದಿನದ ಪಂದ್ಯಗಳಲ್ಲಿ 178 ವಿಕೆಟ್‌ಗಳು, ಅಂತರರಾಷ್ಟ್ರೀಯ ಟ್ವೆಂಟಿ20ಯಲ್ಲಿ 65 ವಿಕೆಟ್‌ಗಳು ಇವರ ಖಾತೆಗೆ ಸೇರಿವೆ. ಟೆಸ್ಟ್ ಇನಿಂಗ್ಸ್ ಒಂದರಲ್ಲಿ 20 ಸಲ ಐದು ವಿಕೆಟ್ ಗೊಂಚಲುಗಳು, ಪಂದ್ಯವೊಂದರಲ್ಲಿ ಮೂರು ಸಲ 10ಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದಿದ್ದಾರೆ. ಟೆಸ್ಟ್ ಇನಿಂಗ್ಸ್‌ನಲ್ಲಿ ಪಾಕ್ ಎದುರು 169 ರನ್ ಕೂಡ ಗಳಿಸಿದ್ದಾರೆ. ಟೆಸ್ಟ್‌ಗಳಲ್ಲಿ ಹಾಕಿರುವ 33,698 ಎಸೆತಗಳ ನೆನಪುಗಳೀಗ ಅವರ ಕಣ್ಣಮುಂದೆ ಇರಬೇಕು.

ಇಂತಹ ಬ್ರಾಡ್, ತಾವಾಡಿದ ಕೊನೆಯ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದ್ದು, ಹಾಕಿದ ಕೊನೆಯ ಎಸೆತದಲ್ಲಿ ವಿಕೆಟ್ ಪಡೆದದ್ದು ಚಿರಸ್ಮರಣೀಯ. ■